**ಅಸಲು ದಾವಾ ಸಂ.5/2007**
ಪಿ .ಡಬ್ಲ್ಯೂ-1

ದಿನಾಂಕ 05-08-2024 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಂದುವರೆದ ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ ಐ ಸಿ ಬಿ ವಕೀಲರಿಂದಃ-**

ಈ ದಾವೆಯನ್ನು ಜಾಗೆಯ ಸಂಬಂದ ದಾಖಲಿಸಿದ್ದು ಅದರ ಸರ್ವೆ ನಂಬರ ನನಗೆ ಹೇಳಲು ಬರುವದಿಲ್ಲ .ದಾವಾ ಆಸ್ತಿ ಕುರಿತು ನನ್ನ ತಂದೆ ಮೃತ ಬಾಗಪ್ಪ, ಸಿತವ್ವಾ ಮತ್ತು ದುರ್ಗವ್ವ ತಂದೆ ನಾಗಪ್ಪ ಹರಿಜನ ಇವರ ಮೇಲೆ ಅಸಲು ದಾವಾ ನಂಬರ 51/1989 ನ್ನು ದಾಖಲಿಸಿದ್ದರು ಎಂದರೆ ಸರಿ . ನನ್ನ ತಂದೆ ಹೆಬ್ಬಟ್ಟಿನ ಸಹಿಯನ್ನು ಮಾಡುತ್ತಿದ್ದರು . ದುರ್ಗವ್ವ ತಂದೆ ನಾಗಪ್ಪ ಹರಿಜನ ಇವರು ನನ್ನ ತಂದೆಗೆ ಯಾವುದೇ ರೀತಿಯ ಸಂಬಂದ ಇರುವದಿಲ್ಲ . ಅದೇ ರೀತಿ ಬಾಗಪ್ಪ ಮತ್ತು ಸೀತವ್ವ ಇವರಿಗೂ ಸಹ ನನ್ನ ತಂದೆ ಸಂಬಂದ ಇರುವದಿಲ್ಲ . ಸದರಿ ದಾವೆಯನ್ನು ನನ್ನ ತಂದೆ ದಿನಾಂಕ 03-09-1998 ರಂದು ಹಿಂಪಡೆದುಕೊಂಡರು ಎಂದರೆ ಸರಿಯಲ್ಲ . ಸದರಿ ದಾವೆಯನ್ನು ನನ್ನ ತಂದೆ ಹಕ್ಕು ಬಿಟ್ಟ ಕಬೂಲಿ ಪತ್ರದ ಮೇಲೆ ದಾಖಲಿಸಿದ್ದರು ಎಂದರೆ ಸರಿ . ನಾನು ದಾಖಲಿಸಿರುವ ಈ ದಾವೆಯಲ್ಲಿ ಅಸಲು ದಾವಾ ನಂಬರ 51/1989 ರಲ್ಲಿ ಏನು ಆದೇಶ ಆಗಿರುತ್ತದೆ ಎಂದು ಬರೆದಿರುವದಿಲ್ಲ . ಅಸಲು ದಾವಾ ನಂಬರ 51/1989 ನ್ನು ನನ್ನ ತಂದೆ ಜೀವಂತ ಇರುವಾಗಲೇ ಹೊಸ ದಾವೆ ಮಾಡುತ್ತೇನೆಂದು ಹಿಂಪಡೆದುಕೊಂಡಿದ್ದರು ಎಂದರೆ ಸರಿಯಲ್ಲ . ನನ್ನ ತಂದೆ ದಾವೆಯನ್ನು ವಾಪಸ್ ತೆಗೆದುಕೊಂಡಾಗಿನಿಂದ 9 ವರ್ಷಗಳವರೆಗೆ ನಾನು ಬೇರೆ ದಾವೆಯನ್ನು ದಾಖಲಿಸಿರುವದಿಲ್ಲ ಎಂದರೆ ಸರಿ . ನನ್ನ ತಂದೆ ದಿನಾಂಕ 06-06-1999 ರಂದು ಮರಣ ಹೊಂದಿದರು ಎಂದರೆ ಸರಿ.

ನಾನು ಹಾಜರು ಪಡಿಸಿದ ದಾವಾ ವಂಶಾವಳಿಯಲ್ಲಿ ಬಾಗಪ್ಪ ಮತ್ತು ಹಣಮಂತ ಇವರಿಗೆ ಮಕ್ಕಳು ಇರುವದಿಲ್ಲ ಎಂದು ಕಾಣಿಸಿರುತ್ತೇನೆ ಎಂದರೆ ಸರಿ . ಮಹಾದೇವಿ ಇವರು ನನ್ನ ಖಾಸ ತಂಗಿ ಇರುತ್ತಾರೆ ಎಂದರೆ ಸರಿ . ನನ್ನ ತಂದೆಯ ಹೆಸರಿನಲ್ಲಿ ಆಸ್ತಿ ನಂಬರ 6192 ಮತ್ತು ಪುರಸಬೆಯ ನಂಬರ 2334 ಕ್ಕೆ ನನ್ನ ಹೆಸರನ್ನು ನನ್ನ ತಂದೆ ಮರಣ ಹೊಂದಿದ ನಂತರ ನಾನು ಮಾಡಿಕೊಂಡಿರುತ್ತೇನೆ ಎಂದರೆ ಸರಿ . ಸಾಕ್ಷಿಗೆ ಸದರಿ ಪಿ ಆರ್ ಕಾರ್ಡ ಮತ್ತು ಆಸ್ತಿ ತೆರಿಗೆ ಉತಾರೆಗಳನ್ನು ತೋರಿಸಲಾಗಿ ಸಾಕ್ಷಿ ಅವುಗಳನ್ನು ನೋಡಿ ಒಪ್ಪಿದ್ದರಿಂದ ಅವುಗಳನ್ನು ಕ್ರಮವಾಗಿ ನಿಡಿ- 1 ಮತ್ತು ನಿಡಿ- 2 ಎಂದು ಗುರುತಿಸಲಾಯಿತು . ನನ್ನ ತಂದೆಗೆ ನಿಡಿ-1 ಮತ್ತು ನಿಡಿ- 2 ನ್ನು ಹೊರತುಪಡಿಸಿ ಬೇರೆ ಆಸ್ತಿಗಳು ಇರುವದಿಲ್ಲ ಎಂದರೆ ಸರಿ . ದಾವಾ ಆಸ್ತಿ ಬಾಗಪ್ಪ ಇವರಿಗೆ ಬಂದಿರುತ್ತದೆ ಎಂದರೆ ಸರಿ ಅದು ನಮ್ಮ ಮುತ್ಯಂದಿರು 03 ಜನರ ಪೈಕಿ ಬಾಗಪ್ಪ ಇವರು ಹಿರಿಯರು ಇದ್ದ ಕಾರಣ ಅವರ ಹೆಸರಿಗೆ ಮಾಡಿರುತ್ತಾರೆ . ದಾವಾ ಆಸ್ತಿ ಮೂಲ ಪುರಷನಾದ ರಾಮಪ್ಪ ಇವರ ಹೆಸರಿಗೆ ಮಂಜೂರು ಆಗಿರುವದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಬಾಗಪ್ಪ, ಹಣಮಂತ ಮತ್ತು ಯಲ್ಲಪ್ಪ ಇವರು ಅರಣ್ಯ ಪ್ರದೇಶದ ಜಾಗೆಯ ಕಬ್ಜಾದಲ್ಲಿ ಇದ್ದಾಗ ಬಾಗಪ್ಪ ಇವರ ಹೆಸರಿಗೆ ಮಂಜೂರು ಆಗಿರುತ್ತದೆ . ಸರ್ಕಾರದಿಂದ ಸದರಿ ಆಸ್ತಿ 03 ಜನರ ಹೆಸರಿಗೆ ಮಂಜೂರು ಆಗಿರುತ್ತದೆ . ಅದನ್ನು ತೋರಿಸಲು ಕಾಗದವನ್ನು ಹಾಜರು ಪಡಿಸಿರುವದಿಲ್ಲ .ಬಾಗಪ್ಪ, ಹಣಮಂತ ಮತ್ತು ಯಲ್ಲಪ್ಪ ಇವರು ಅರಣ್ಯ ಪ್ರದೇಶದ ಜಾಗೆಯ ಕಬ್ಜಾದಲ್ಲಿ ಇದ್ದಾಗ ಬಾಗಪ್ಪ ಇವರ ಹೆಸರಿಗೆ ದಾವಾ ಆಸ್ತಿ

ಮಂಜೂರು ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ . ಬಾಗಪ್ಪ ಇವರ ಹೆಸರಿಗೆ ದಾವಾ ಆಸ್ತಿ ಮಂಜೂರಾಗಿರುತ್ತದೆ ಎಂದು ತೋರಿಸಲು ದಾಖಲೆಯನ್ನು ಹಾಜರು ಪಡಿಸಿರುವದಿಲ್ಲ . ನಾನು ಬಾಗಪ್ಪ ಇವರ ಮೊಮ್ಮಗ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ . ಬಾಗಪ್ಪ ಇವರಿಗೆ ಮಕ್ಕಳು ಇಲ್ಲದ ಕಾರಣ ನಾನು ಅವರ ಮೊಮ್ಮಗ ಇರುವದಿಲ್ಲ ಎಂದರೆ ಸರಿಯಲ್ಲ . ಬಾಗಪ್ಪ ಇವರಿಗೆ ಮಕ್ಕಳು ಇರುವದಿಲ್ಲ ಎಂದು ಹೇಳಿರುತ್ತೇನೆ ಎಂದರೆ ಸರಿ . ಮಹಾದೇವಿ ಇವರನ್ನು ಈ ದಾವೆಯಲ್ಲಿ ಪಕ್ಷಗಾರಳನ್ನಾಗಿ ಮಾಡಿರುವದಿಲ್ಲ ಎಂದರೆ ಸರಿ. ಆಕೆಯು ಸ್ವತಃ ನಾನು ಕೋರ್ಟಿಗೆ ಬರುವದಿಲ್ಲ ನೀವೇ ಮಾಡಿಕೊಳ್ಳಿ ಎಂದು ಹೇಳಿರುತ್ತಾರೆ . ದಾವಾ ಆಸ್ತಿ ಕುರಿತಾಗಿ ಬಾಗಪ್ಪ ಇವರು ತನ್ನ ಹೆಂಡತಿಯಾದ ಸೀತವ್ವ ಇವರಿಗೆ ದಾವಾ ಆಸ್ತಿ ಹೋಗಬೇಕೆಂದು ಮೃತ್ಯು ಪತ್ರ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ . ಬಾಗಪ್ಪ ಇವರು ಮರಣ ನಂತರ ದಾವಾ ಆಸ್ತಿ ಸೀತವ್ವ ಇವಳ ಹೆಸರಿಗೆ ಉತಾರ ಆಗಿದೆ ಎಂದರೆ ಸರಿ . ಸೀತವ್ವ ಇವರು ತನ್ನ ಉಪ ಜೀವನಕ್ಕಾಗಿ ಪ್ರತಿವಾದಿ ಇವರ ಹೆಸರಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿದರು ಎಂದರೆ ಸರಿ . ಆಕೆಗೆ ಯಾವುದೇ ಅಡಚಣೆ ಇರಲಿಲ್ಲ . ದಾವಾ ಆಸ್ತಿಯಲ್ಲಿ ಪ್ರತಿವಾದಿ ಸರ್ಕಾರದಿಂದ ಹಣ ಮಂಜೂರು ಮಾಡಿಕೊಂಡು ಕಟ್ಟಡ ಕಟ್ಟಿರುತ್ತಾರೆ ಎಂದರೆ ಸರಿ . ದಾವಾ ಆಸ್ತಿಯ ಕಬ್ಜಾದಲ್ಲಿ ಕಸ್ತೂರವ್ವ ಹಾದಿಮನಿ ಇವರು ಇದ್ದರು ಎಂದರೆ ಸರಿ ಸಾಕ್ಷಿ ಮುಂದುವರೆದು ನಾನು ಸಹ ಇರುತ್ತೇನೆ ಎಂದು ಹೇಳುತ್ತಾರೆ . ದಾವಾ ಆಸ್ತಿ ಖರೀದಿ ಮಾಡಿದಾಗಿನಿಂದ ಅದರ ಕಬ್ಜಾದಲ್ಲಿ ಪ್ರತಿವಾದಿ ಇದ್ದಾರೆಂದರೆ ಸರಿ ನಾನು ಸಹ ಇರುತ್ತೇನೆ ಎಂದು ಹೇಳುತ್ತಾರೆ . ಖರೀದಿ ಆದಾಗಿನಿಂದ ಇಲ್ಲಿಯವರೆಗೆ ದಾವಾ ಆಸ್ತಿಯ ಕರ ವನ್ನು ಪ್ರತಿವಾದಿಯೇ ತುಂಬುತ್ತಿದ್ದಾರೆ ಎಂದರೆ ಸರಿ . ನನ್ನ ತಂದೆ ಮರಣ ಹೊಂದುವವರಿಗೂ ಮತ್ತು ಇಲ್ಲಿಯವರಿಗೂ ದಾವಾ ಆಸ್ತಿಯ ಕಬ್ಜಾದಲ್ಲಿ ನಾನು ಇದ್ದೇನೆಂದು ತೋರಿಸಲು ದಾಖಲಗಳನ್ನು ಹಾಜರು ಪಡಿಸಿರುತ್ತೇನೆ . ಈ ಹಂತದಲ್ಲಿ ವಾದಿ ಪರ ವಕೀಲರು ಯಾವ ತರಹದ ದಾಖಲೆ ಕೇಳುತ್ತಿದ್ದಾರೆಂದು ಹೇಳಿಲ್ಲದ ಕಾರಣ ಈ ಪ್ರಶ್ನೆಯನ್ನು ತೆಗೆದುಕೊಳ್ಳಲು ಆಗುವದಿಲ್ಲ ಎಂದು ಹೇಳಿರುತ್ತಾರೆ ಸದರಿ ಪ್ರಾರ್ಥನೆಯನ್ನು ತಳ್ಳಿ ಹಾಕಿ ಸದರಿ ಪ್ರಶ್ನೆ ಮತ್ತು ಉತ್ತರವನ್ನು ತೆಗೆದುಕೊಳ್ಳಲಾಯಿತು . ನನ್ನ ತಂದೆ ದಾಖಲಿಸಿದ್ದ ದಾವೆಯಲ್ಲಿ ಅವರು ಪುರಸಬೆ ಮತ್ತು ಸಿ ಟಿ ಎಸ್ ಉತಾರೆಯನ್ನು ಹಾಜರು ಪಡಿಸಿರುವದಿಲ್ಲ ಅದೇ ರೀತಿ ನಾನು ಸಹ ದಾವಾ ಆಸ್ತಿ ಕಬ್ಜಾ ತೋರಿಸಲು ಪುರಸಬೆ ಮತ್ತು ಸಿ ಟಿ ಎಸ್ ಉತಾರೆಯನ್ನು ಹಾಜರು ಪಡಿಸಿರುವದಿಲ್ಲ ಎಂದರೆ ಸರಿ . ದಾವಾ ಆಸ್ತಿಗೆ ತೆಗೆದುಕೊಂಡ ಕರೆಂಟ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದರೆ ಸರಿ . ಸದ್ಯ ದಾವಾ ಆಸ್ತಿಯಲ್ಲಿ ಕೊಪರ್ಡೆ ಎನ್ನುವವರು ಬಾಡಿಗೆ ನಾತೆಯಿಂದ ಕಬ್ಜಾದಲ್ಲಿ ಇದ್ದಾರೆ ಎಂದರೆ ಸರಿ . ಈ ಎಲ್ಲ ಸಂಗತಿಗಳು ನನಗೆ ತಿಳಿದಿದ್ದರೂ ಸಹ ಪ್ರತಿವಾದಿಯ ಮೇಲೆ ಸುಳ್ಳು ದಾವೆ ಹುಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ .

ಮರು ವಿಚಾರಣೆ ಃ- ಇಲ್ಲಾ .

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ. ಕೇ. ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ., ಬನಹಟ್ಟಿ.